# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಎಂ ನಾಗರಾಜು |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1133 |
| ಉತ್ತರಿಸಬೇಕಾದ ದಿನಾಂಕ | : | 18.12.2024 |
| ಉತ್ತರಿಸಬೇಕಾದ ಸಚಿವರು | : | ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2028ರ ವೇಳೆಗೆ ರಾಜ್ಯದ ಎಲ್ಲಾ ನಿರಾಶ್ರಿತ / ವಸತಿ ರಹಿತ ನಾಗರೀಕರಿಗೆ ವಸತಿ ಒದಗಿಸಲು ಪ್ರಸ್ತಾವನೆ ರಾಜ್ಯ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಈ ಉದ್ದೇಶಕ್ಕಾಗಿ ಇದುವರೆಗೆ ರೂಪಿಸಲಾದ ವಸತಿ ಯೋಜನೆಗಳು ಯಾವುವು; ಮತ್ತು ಇದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; | ಹೌದು,<br>ರಾಜ್ಯದ ನಿರಾಶ್ರಿತ/ವಸತಿ ರಹಿತ ನಾಗರೀಕರಿಗೆ ಈ ಕೆಳಕಂಡ ಯೋಜನೆಗಳಡಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ.<br>ಗ್ರಾಮೀಣ ವಸತಿ ಯೋಜನೆಗಳು:<br>1. ಬಸವ ವಸತಿ ಯೋಜನೆ<br>2. ಪ್ರಧಾನ ಮಂತ್ರಿ ಆವಾಸ್ ಯೋಜನೆ<br>3. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ<br>4. ದೇವರಾಜು ಅರಸು ವಸತಿ ಯೋಜನೆ<br>5. PM-JANMAN ಯೋಜನೆ<br><br>ನಗರ ವಸತಿ ಪ್ರದೇಶ:<br>1. ವಾಜಪೇಯಿ ನಗರ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ವಸತಿ ಯೋಜನೆ<br>3. ದೇವರಾಜು ಅರಸು ವಸತಿ ಯೋಜನೆ<br>4. ಪ್ರಧಾನ ಮಂತ್ರಿ ಆವಾಸ್ ಯೋಜನೆ<br>5. ಮುಖ್ಯಮಂತ್ರಿಗಳ ಒಂದು ಲಕ್ಷ ಬಹುಮಹಡಿ ವಸತಿ ಯೋಜನೆ<br><br>ನಿವೇಶನ ಯೋಜನೆಗಳು:<br>1. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>2. ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ<br><br>ಸರ್ಕಾರವು ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸಲಾಗುವ ಅನುದಾನ ಮತ್ತು ಗುರಿಗೆ ಅನುಗುಣವಾಗಿ ಈ ಮೇಲ್ಕಂಡ ಯೋಜನೆಗಳ ಮೂಲಕ ಗುಡಿಸಲು ವಾಸಿಗಳನ್ನು ಒಳಗೊಂಡಂತೆ ಎಲ್ಲಾ ವಸತಿರಹಿತರಿಗೆ ವಸತಿ ಸೌಕರ್ಯವನ್ನು ಒದಗಿಸಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ನಿರ್ದೇಶನದಂತೆ 2018ರಲ್ಲಿ ರಾಜ್ಯಾದ್ಯಂತ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನು ಗ್ರಾಮೀಣ ಪ್ರದೇಶದಲ್ಲಿ ನಡೆಸಲಾಯಿತು. ರಾಜ್ಯ ವಸತಿ ಯೋಜನೆಗಳಿಗೂ ಈ ಸಮೀಕ್ಷೆಯಲ್ಲಿನ ಫಲಾನುಭವಿಗಳ ಅದರಂತೆ ನಗರ ಪ್ರದೇಶದಲ್ಲಿ ಬೇಡಿಕೆಗನುಗುಣವಾಗಿ ವಸತಿ/ನಿವೇಶನ ರಹಿತರ ಸಮೀಕ್ಷೆ ಕೈಗೊಂಡು ಸದರಿ ಸಮೀಕ್ಷೆಯಲ್ಲಿರುವ ಅರ್ಹ ಫಲಾನುಭವಿಗಳಿಗೆ ಹಂತ ಹಂತವಾಗಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ.<br><br>ಪ್ರಸ್ತುತ ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯಾದ್ಯಂತ ಮತ್ತೊಮ್ಮೆ 2024-25ನೇ ಸಾಲಿಗೆ ವಸತಿ/ನಿವೇಶನ ರಹಿತರ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ.<br><br>ಸದರಿ ಸಮೀಕ್ಷೆಗೆ ಅವಶ್ಯವಿರುವ ತಾಂತ್ರಿಕ ಪ್ರಕ್ರಿಯೆಯು ಪ್ರಗತಿಯಲಿರುತ್ತದೆ. |
| ಆ) | 2028ರ ವೇಳೆಗೆ ವಸತಿಯ ಅಂದಾಜು ಬೇಡಿಕೆ ಎಷ್ಟು; ಇದಕ್ಕೆ ಯಾವ ರೀತಿಯ ಸಿದ್ಧತೆಗಳನ್ನು ರೂಪಿಸಿಕೊಂಡಿದೆ; | |

| | | |
|---|---|---|
| ಇ) | ಈ ಹಿಂದ ಶಾಸಕರಿಗೆ ಮತ್ತು ಸಂಸದರಿಗೆ ವಸತಿ / ನಗರಾಭಿವೃದ್ಧಿ ಇಲಾಖೆಯಿಂದ 'ಜಿ' ವರ್ಗದ ನಿವೇಶನಗಳನ್ನು ಮನೆಗಳನ್ನು ಹಂಚಿಕೆ ಮಾಡಲಾಗುತ್ತಿತ್ತು. ಆದರೆ ಆ ಯೋಜನೆಯನ್ನು ಯಾವ ಕಾರಣಕ್ಕೆ ರದ್ದುಗೊಳಿಸಲಾಗಿದೆ; ಶಾಸಕರು ಮತ್ತು ಸಂಸದರು ಸರ್ಕಾರದಿಂದ ನಿವೇಶನಗಳನ್ನು/ ಮನೆಗಳನ್ನು ಪಡೆಯಬೇಕಾದಲ್ಲಿ, ಯಾವ ಮಾನದಂಡಗಳು ಅಥವಾ ಯೋಜನೆಯಡಿ ಅರ್ಜಿ ಸಲ್ಲಿಸಬಹುದಾಗಿದೆ; | ಅನ್ವಯಿಸುವುದಿಲ್ಲ. |
| ಈ) | ವಸತಿ ಇಲಾಖೆಯ ಅಧೀನ ಸಂಸ್ಥೆಯಿಂದ ನಿರ್ಮಿಸಲಾಗಿರುವ ವಿಲ್ಲಾಗಳನ್ನು (Villas) ಹಂಚಿಕೆ ಮಾಡುವಲ್ಲಿ ಯಾವ ಮಾನದಂಡಗಳನ್ನು ಪಾಲಿಸಲಾಗಿದೆ ಮತ್ತು ಈ ಯೋಜನೆಯನ್ನು ಯಾವ ವರ್ಗದ ಜನಾಂಗದವರಿಗೆ ಮೀಸಲಿಡಲಾಗಿದೆ (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |

ಸಂಖ್ಯೆ: ವಇ 371 ಹೆಚ್‌ಎಎಂ 2024

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು